ಗುಣವಾಗಿ ಈಗಾಗಲೇ ತಮ್ಮ ಮುಂದೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸಿಂಧ್ಯರವರಿಗೆ ಕೊಟ್ಟ ಉತ್ತರವೇ ಮಾನ್ಯ ಬೈರೇಗೌಡರಿಗೂ ಅನ್ವಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ ತತ್‌ಕ್ಷಣದಿಂದ ಆ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಎಂದು ಮತ್ತೊಂದು ಸಾರಿ ಅವರಿಗೆ ಆಶ್ವಾಸನೆಯನ್ನು ಕೊಡಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ. — ಮಾನ್ಯ ಅಧ್ಯಕ್ಷರೆ, ತಾವುಗಳು ರೈತರ ನೆರವಿಗೆ ಮತ್ತು ನಮ್ಮ ನೆರವಿಗೆ ಬರಬೇಕು. ನಮ್ಮ ಕೋಲಾರ ಜಿಲ್ಲೆಯ ಸುಮಾರು ಎರಡು ತಾಲ್ಲೂಕುಗಳಲ್ಲಿ ನಿನ್ನೆ ಬೆಳಿಗ್ಗೆಯಿಂದ ರಾತ್ರಿವರೆಗೆ ನಾನು ತಿರುಗಾಡಿ ಬಂದಿದ್ದೇನೆ. ಇಲ್ಲಿ ಮಾನ್ಯ ಸಚಿವರು ಹೇಳಿರತಕ್ಕಂಥಾದ್ದು ಅಲ್ಲಿ ಜಾರಿಗೆ ಬಂದಿಲ್ಲ. ಈಗಲೂ ಕೂಡ ೧೫೦ ವೋಲ್ಟೇಜ್ ಇದೆ. ಅದಕ್ಕೆ ಅವರು ಏನು ಏರ್ಪಾಟು ಮಾಡುತ್ತಾರೆ ಎಂದು ಹೇಳಲಿ. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಈ ಪರಿಸ್ಥಿತಿ ಇದೆ, ಅವರು ಬರುವ ಹಾಗಿದ್ದರೆ ಬಂದು ನೋಡಲಿ. ವೋಲ್ಟೇಜ್ ಮೆಜರ್‌ಮೆಂಟ್ ಮಾಡುವ ಉಪಕರಣದ ಮೂಲಕ ಅವರೇ ಮೆಜರ್‌ಮೆಂಟ್ ಮಾಡಲಿ.

ಶ್ರೀ ವಾಟಾಳ್ ನಾಗರಾಜ್. — ಚಾಮರಾಜ್ ನಗರದ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಹೇಳಿ...

ಶ್ರೀ ಸಿ. ಬೈರೇಗೌಡ. — ಇಡೀ ರಾಜ್ಯದಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಿಗೆ ಪಂಪುಸೆಟ್ಟುಗಳು ಇರತಕ್ಕಂಥಾದ್ದು ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ. — ಸನ್ಮಾನ್ಯ ಸಚಿವರು ಏನು ಹೇಳಿದರು ಎಂದರೆ, ರೈತರ ಕಾರಣಕ್ಕಾಗಿ ಇಂಡಸ್ಟ್ರಿಗಳ ಪವರ್ ಕಟ್ ಮಾಡುತ್ತೇನೆಂದರು. what extent ಎನ್ನುವುದು ಬಹಳ ಮುಖ್ಯ. ಎಷ್ಟು ಕಡಿಮೆ ಮಾಡಿದ್ದೀರಿ ಎಂದು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ. — ಪಂಪ್‌ಸೆಟ್‌ಗಳಿಗೆ ವೋಲ್ಟೇಜ್ ಕಡಿಮೆಯಾಗಿರುವುದರಿಂದ ಅದನ್ನು ಸರಿದೂಗಿಸಲು ಎಷ್ಟು ಬೇಕೆಕೋ ಅಷ್ಟು ಕಟ್ ಮಾಡಲಾಗುವುದು.

ಶ್ರೀ ಸಿ. ಬೈರೇಗೌಡ. — ನಾನು ತಿಳಿದಂತೆ ಕಾರ್ಖಾನೆಗಳಿಗೆ ಶೇಕಡ ೫೦ರಷ್ಟು ಪವರ್ ಕಟ್ ಇತ್ತು. ಈಗ ಅದನ್ನು ಶೇಕಡ ೫೦ ರಿಂದ ೫೫ ಮಾಡಿದ್ದಾರೆಯೇ ಅಥವಾ ೬೦ ಮಾಡಿದ್ದಾರೆಯೇ. ಆಲ್ಲಿ ಉಳಿತಾಯ ಆಗಿರತಕ್ಕಂಥಾದ್ದು ಎಷ್ಟು. ಉಳಿತಾಯ ಮಾಡಿರುವುದರಲ್ಲಿ ಎಷ್ಟು ವಿದ್ಯುತ್ತನ್ನು ವ್ಯವಸಾಯಕ್ಕಾಗಿ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ. — ಆದರ ವಿವರವನ್ನು ನಾಳೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ. — ಹಾಗಾದರೆ ಈ ಪ್ರಶ್ನೆಯನ್ನು ನಾಳೆ ಕೇಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು. — ಸಚಿವರೆ ನಾಳೆ ಹೇಳುತ್ತೀರಾ ?

ಶ್ರೀ ಪುಟ್ಟಸ್ವಾಮಿಗೌಡ. — ಸನ್ಮಾನ್ಯ ಸಿಂಧ್ಯ ಅವರು ಕೈಗಾರಿಕೆಗಳಿಗೆ ಎಷ್ಟು ಕಡಿತ ಮಾಡಿದ್ದೀರೆಂದು ಕೇಳಿದ್ದನ್ನು ನಾಳೆ ಕೊಡುತ್ತೇನೆ.

ಅಧ್ಯಕ್ಷರು. — ಈ ಬಗ್ಗೆ ನೀವು ಹೊರಡಿಸುವ ಗವರ್ನಮೆಂಟ್ ಆರ್ಡರನ್ನು ಸಭೆಯ ಮುಂದಿಟ್ಟರೆ ವಿವರಗಳೆಲ್ಲ ಸಿಗುತ್ತದೆ.

ಶ್ರೀ ಸಿ. ಬೈರೇಗೌಡ. — ಅಧ್ಯಕ್ಷರೇ, ಮಾನ್ಯ ಸಚಿವರು ಈಗಾಗಲೇ ನಾವು ಅದನ್ನು ಜಾರಿಗೆ ಕೊಟ್ಟಿದ್ದೇವೆ ಎಂದಿದ್ದಾರೆ. ಕೊಟ್ಟಿರಬಹುದು, ಇಲ್ಲ ಎಂದು ಹೇಳುತ್ತಾ ಇಲ್ಲ. ಆದರೆ ನಮಗೆ ಅದು ಗೊತ್ತಾಗಬೇಕು.

ಸಭೆಯಲ್ಲಿ ಮುಂದಿಡಲಾದ ಕಾಗದ ಪತ್ರಗಳು

೧. ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು). —

೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ಕಾಯ್ದೆಯ ೪೮ (೫)ನೇ ಕಲಮಿನ ಮೇರೆಗೆ—

ಧಾರವಾಡ ಜಿಲ್ಲೆಯ ಮುಂಡರಗಿಯ ಶ್ರೀ ಈಶ್ವರಪ್ಪ ವೀರಭದ್ರಪ್ಪ ಹುಚಿನಾಳಸ ಅವರಿಗೆ ಸೇರಿದ ಚಲನಚಿತ್ರ ಮುಂದಿರ ಕಟ್ಟಡವನ್ನು ಪೂರ್ಣಗೊಳಿಸಲು ಮತ್ತಷ್ಟು ಕಾಲಮಿತಿಯನ್ನು

ವಿಸ್ತರಿಸಲು ೧೯೭೧ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ನಿಯಮಗಳ ೨೮ (೧) ಹಾಗೂ (೨) ಹಾಗೂ ೩೬ನೇ ನಿಯಮಗಳಿಂದ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೬-೧೨-೮೯ ರಂದು ಹೊರಡಿಸಲಾದ ಹೆಚ್‌ಡಿ ೧೮೨ ಸಿಎನ್‌ಎ ೮೯ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೨. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೮) ೧೯೮೯ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ೪೮ (೫)ನೇ ಕಲಮಿನ ಮೇರೆಗೆ—

೧೯೮೬-೮೭ನೇ ಸಾಲಿಗೆ ಸಂಬಂಧಿಸಿದಂತೆ (೧) ಹುಬ್ಬಳ್ಳಿ-ಧಾರವಾಡ (೨) ಹಾಸನ (೩) ಬಿಜಾಪುರ ಹಾಗೂ (೪) ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿ.

೮) ೧೯೭೫ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಲೆಕ್ಕ ನಿಯಂತ್ರಣಗಳ ೭ (೮) ನಿಯಮದ ಮೇರೆಗೆ—

೧೯೮೭-೮೮ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿಯ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

೩. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಬಿ ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು) ಅವರ ಪರವಾಗಿ.—

೧೯೫೬ನೇ ಇಸವಿಯ ಕಂಪನಿಗಳ ಕಾಯ್ದೆಯ ೬೧೯ (೮) ಕಲಮಿನ ಮೇರೆಗೆ—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಯಮಿತದ ೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೪. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಎ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು) ಅವರ ಪರವಾಗಿ.—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಮೈಸೂರು ಕಾಸ್‌ಮೆಟಿಕ್ಸ್ ನಿಯಮಿತದ ೨೩ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು,— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ (ಸುಳ್ಯ),— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆಯೋಗ ರಚಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಗಂಧದ ಕಳ್ಳಸಾಗಾಣಿಕೆದಾರ, ಆನೆಗಳ ಹಂತಕ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ೪೯ನೇ ನಿಯಮಾವಳಿ ಕೆಳಗೆ ಒಂದು ನಿಲುವಳಿ ಸೂಚನೆ ಕಳಿಸಿದ್ದೇನೆ. ಬಹಳ ಮುಖ್ಯವಾದ ವಿಷಯ ಎತ್ತುತ್ತಿದ್ದೇವೆ.

ಅಧ್ಯಕ್ಷರು.—ಇಲ್ಲಿ ಕೇಳಿ, ತಾವು ಒಂದು ನಿಲುವಳಿ ಸೂಚನೆಯನ್ನು ಈ ದಿವಸ ಬೆಳಿಗ್ಗೆ ೧೦.೧೫ಕ್ಕೆ ವಿಧಾನಮಂಡಲದ ಕಚೇರಿಗೆ ತಲುಪಿಸಿದ್ದೀರಿ ೪೯ನೇ ನಿಯಮ ಏನು ಹೇಳುತ್ತದೆ ಎಂದರೆ...

(ಗದ್ದಲ)